**ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕಿಯರು ವಿರಳಾತಿವಿರಳ. ಅಂಥ ಕಿರುಪಟ್ಟಿಗೆ ಮತ್ತೊಂದು ಹೆಸರು ಸೇರ್ಪಡೆ, ವಿಸ್ಮಯಾ ಗೌಡ ಅವರದ್ದು. ಚಿತ್ರರಂಗದಲ್ಲಿ ನಿರ್ದೇಶಕಿಯಾಗಿ ನೆಲೆಯೂರಿ, ನಿರಂತರವಾಗಿ ಸದಭಿರುಚಿಯ ಸಿನಿಮಾಗಳನ್ನು ಕೊಡುವ ಕನಸು ಅವರದ್ದು.**

■ ಪದ್ಮನಾಭ ಭಟ್

# ಬಣ್ಣದ ಲೋಕದ ವಿಸ್ಮಯ



ಅಮ್ಮ ಮಗಳನ್ನು ಮಡಿಲಲ್ಲಿ ಕೂಡಿಸಿಕೊಂಡು ಕಥೆಗಳನ್ನು ಹೇಳುತ್ತಿದ್ದರೆ, ಮಗಳ ಮನಸ್ಸಿನಲ್ಲಿ ಆ ಕಥೆಗಳನ್ನು ಹೇಗೆ ಸಿನಿಮಾ ಮಾಡಬಹುದು ಎಂಬ ಕಾಲ್ಪನಿಕ ದೃಶ್ಯಾವಳಿಗಳು ಓಡುತ್ತಿದ್ದವು. ಟೀವಿಯಲ್ಲಿ ಬರುತ್ತಿದ್ದ ಸಿನಿಮಾಗಳನ್ನು ನೋಡುತ್ತಿದ್ದಾಗಲೂ ಅದರಲ್ಲಿನ ಸಣ್ಣ ಪುಟ್ಟ ದೋಷಗಳೂ ಆ ಹುಡುಗಿಯ ಮನಸಲ್ಲಿ ಕಿರಿಕಿರಿ ಹುಟ್ಟಿಸುತ್ತಿದ್ದವು. ನಾನು ಈ ಸಿನಿಮಾ ನಿರ್ದೇಶನ ಮಾಡಿದ್ದರೆ ಹೇಗೆ ಮಾಡುತ್ತಿದ್ದೆ ಎಂಬ ಕಲ್ಪನಾಲಹರಿಯಲ್ಲಿ ಮುಳುಗಿಹೋಗುತ್ತಿದ್ದಳು. ತೆರೆಯ ಹಿಂದಿನ ಆ ವಿಸ್ಮಯ ಲೋಕದಲ್ಲಿ ಮೈಮರೆಯುತ್ತಿದ್ದ ಹುಡುಗಿಯ ಹೆಸರು ವಿಸ್ಮಯಾ ಗೌಡ.

ಸಾಮಾನ್ಯವಾಗಿ ಸಿನಿಮಾರಂಗಕ್ಕೆ ಬರಲು ಇಷ್ಟಪಡುವವರು, ಅದರಲ್ಲಿಯೂ ಹೆಣ್ಣುಮಕ್ಕಳು ನಟಿಯಾಗಬೇಕು ಎಂದೇ ಕನಸು ಕಂಡಿರುತ್ತಾರೆ. ಆದರೆ ವಿಸ್ಮಯಾ ಅವರ ಜಗತ್ತೇ ಬೇರೆ. ನಟಿಯಾಗಿ ಯಾರದೋ ಕಲ್ಪನೆಗೆ ಜೀವ ತುಂಬಿ ಹೋಗುವುದಕ್ಕಿಂತ ನಿರ್ದೇಶಕಿಯಾಗಿ ತನ್ನದೇ ಕಲ್ಪನೆಗೆ ಸಿನಿಮಾರೂಪದಲ್ಲಿ ಜೀವತುಂಬಿ ಬೆಳ್ಳಿಪರದೆಯ ಮೇಲೆ ನೋಡಬೇಕು ಎಂಬುದು ಅವರ ಕನಸು. ಅವರೀಗ ತಮ್ಮ ಕನಸು ಸಾಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಗಟ್ಟಿ ಹೆಜ್ಜೆಯಿಟ್ಟಿದ್ದಾರೆ.

ವಿಸ್ಮಯಾ ಕುಶಾಲನಗರದಲ್ಲಿಯೇ ಹುಟ್ಟಿ ಬೆಳೆದ ಹುಡುಗಿ. ಓದಿದ್ದು ಮೆಕ್ಯಾನಿಕಲ್ ಇಂಜಿನಿಯರ್. ಮನಸ್ಸು ಸಿನಿಮಾ ತಾಂತ್ರಿಕತೆಯತ್ತ ನೆಟ್ಟಿತ್ತು. ಬಾಲ್ಯದಿಂದಲೂ ಇದ್ದ ಪುಸ್ತಕ ಓದಿನ, ಬರವಣಿಗೆಯ ಹವ್ಯಾಸ ಅವರ ಕನಸಿಗೆ ನೀರೆರೆಯುತ್ತಲೇ ಇತ್ತು. ಆದರೆ ಅವರನ್ನು ನೋಡಿದವರೆಲ್ಲ ಹೇಳುತ್ತಿದ್ದುದು, 'ಇಷ್ಟು ಸುಂದರವಾಗಿದೀಯಾ. ನಟಿಯಾಗು' ಎಂದು. ನಿರ್ದೇಶನದ ಕನಸಿಗೆ ಕಾವು ಕೊಟ್ಟು ಕಾಪಿಡುತ್ತಿದ್ದ ಹುಡುಗಿಗೆ ಜಾಹೀರಾತಿನಲ್ಲಿ ನಟಿಸಲು, ಮಾಡೆಲಿಂಗ್ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಅವಕಾಶಗಳು ಬರತೊಡಗಿದವು. ಕೆಲವು ವರ್ಷ ಮಾಡೆಲಿಂಗ್‌ನಲ್ಲಿ ಸಕ್ರಿಯರಾಗಿದ್ದರೂ ಅವರ ಮನಸ್ಸೆಲ್ಲವೂ ಕ್ಯಾಮೆರಾ ಹಿಂದಿನ ನಿರ್ದೇಶಕನ ಕುರ್ಚಿಯಲ್ಲಿಯೇ ನೆಟ್ಟಿತ್ತು.

ಈಗ ವಿಸ್ಮಯಾ ನಿರ್ದೇಶಕಿಯಾಗುವ ಸಂಭ್ರಮದಲ್ಲಿದ್ದಾರೆ. ಕಳೆದ ಒಂದೂವರೆ ವರ್ಷಗಳಿಂದ ತಿದ್ದಿ ತಿದ್ದಿ ಸಿದ್ಧಪಡಿಸಿದ ಸ್ಕ್ರಿಪ್ಟ್ ಈಗ ಸಿನಿಮಾ ಆಗುವ ಹಂತದಲ್ಲಿದೆ.

'ನಿರ್ದೇಶನದ ಆಸೆ ಮೊದಲಿನಿಂದಲೂ ಇತ್ತು. ಅದಕ್ಕೆ ಸರಿಯಾದ ಅವಕಾಶ, ಪ್ಲಾಟ್‌ಫಾರಂ ಸಿಕ್ಕಿರಲಿಲ್ಲ. ಈಗ ಪ್ಲಾಟ್‌ಫಾರಂ ತಾನಾಗಿಯೇ ಸಿಕ್ಕುವುದಿಲ್ಲ. ಅದನ್ನು ನಾವೇ ಸೃಷ್ಟಿಸಿಕೊಳ್ಳಬೇಕು